

ಅಡ್ಡಹೊಳೆಯ ವೈಭವ

# ಬಿಸಿಲೆಯ ಡ್ರೋಣ್ ನೋಟ

**ಹಸಿರು ದಟ್ಟೈಸಿದ ಕಾನನ, ಹೆಬ್ಬಂಡೆಗಳ ನಡುವೆ ಹಾಯ್ದು ಹಾಲ್ನೊರೆಯಂತೆ ಹರಿವ ನದಿ ತೊರೆಗಳು, ಮೋಡಗಳ ಮುದ್ದಿಸುವ ಗಿರಿಶಿಖರಗಳು... ಭೂಮಿ ಮೇಲಿನ ಸ್ವರ್ಗದಂತಿರುವ 'ಬಿಸಿಲೆ', ಡ್ರೋಣ್ ಕಣ್ಣಲ್ಲಿ ಕಂಡಿದ್ದು ಹೀಗೆ...**

■ **ಶರತ್ ಹೆಗ್ಡೆ, ಕಡ್ತಲ**

ಡ್ರೋಣ್ ಚಿತ್ರಗಳು: ಜಗದೀಶ ಬಿ. ಪುತ್ತೂರು

ಸದ್ದಿರದ ಪಸುರೆಡೆಯ ಮಲೆನಾಡ ಬನಗಳಲಿ
ಮೊರೆವ ತೊರೆಯೆಡೆಯಲ್ಲಿ ಗುಡಿಸಲೊಂದಿರಲಿ.
ಅಲ್ಲಿ ಗಿಳಿ ಗೊರವಂಕ ಕೋಗಿಲೆಗಳಿಂಚರವು
ಕಲೆಯುತಲೆಯಲೆಯಾಗಿ ತೇಲಿಬರುತಿರಲಿ

ನೀರವ ಕಾಡು, ಭೋರ್ಗರೆವ ನೀರಝರಿ, ಮಂಜು ಬೆರೆತ ತಣ್ಣನೆಯ ಗಾಳಿ ಇವೆಲ್ಲಾ ಮೈಮನ ಆವರಿಸುವಾಗ ಕುವೆಂಪು ಅವರ ಈ ಮೇಲಿನ ಸಾಲುಗಳು ನೆನಪಾಗದಿರದು. ಹಾಗೆಂದು ಮಲೆನಾಡ ಬನಗಳಲ್ಲಿ ಗುಡಿಸಲೊಂದನ್ನು ಕಟ್ಟಿ ಬಾಳುವುದು ಬಣ್ಣಿಸಿದಷ್ಟು ಸುಲಭವೂ ಅಲ್ಲ. ಆದರೆ, ಒಂದರೆಕ್ಷಣ ಆಸ್ವಾದಿಸುವುದಕ್ಕೇನಡ್ಡಿ? ಅಲ್ವಾ.

ಒಂದೇ ಸಮನಿರುವ ಜಡಿಮಳೆಯ ಮಧ್ಯೆ ಕ್ಯಾಮೆರಾ ಮುಟ್ಟಬೇಕೆನಿಸಿತು. ಬಹುದೀರ್ಘ ಕಾಲದ ಅಂತರದ ಬಳಿಕ ಅದ್ಯಾಕೋ ಕ್ಯಾಮೆರಾ ಕರೆಯಿತೋ, ಮಳೆ ಮಾತನಾಡಿಸಿತೋ ಗೊತ್ತಿಲ್ಲ. ಬಹುಶಃ ಮಳೆ, ಮೋಡ ಬೆಟ್ಟಗಳಿಗೂ ಮಳೆಗಾಲದಲ್ಲಿ ತಮ್ಮ ವಿವಿಧ ಪೋಸು ತೆಗೆಸಿಕೊಳ್ಳಬೇಕು ಅನಿಸಿರಬೇಕು. ಜತೆಯಾದರು ಜಗದೀಶ. ಈ ವರ್ಷ ಬಿಸಿಲೆ, ಕುಲ್ಕುಂದ ಮಾರ್ಗದಲ್ಲಿ ಮೂರು ಬಾರಿ ಓಡಾಡಿದ್ದೆ. ಎರಡು ಬಾರಿ ಕೇವಲ ಛಾಯಾಗ್ರಹಣದ ಉದ್ದೇಶ. ಈ ಬಾರಿ ಪುತ್ತೂರಿನ ಗೆಳೆಯ ಜಗದೀಶ ಜೊತೆಯಾದರು. ಜೊತೆಗೆ ಅವರ ಮುದ್ದಿನ ಡ್ರೋಣ್ ಕ್ಯಾಮೆರಾ ಕೂಡಾ ಇತ್ತು.

ಸುಬ್ರಹ್ಮಣ್ಯ ಸಂಪರ್ಕಿಸುವ ಬಸವನಮೂಲ ದೇವಸ್ಥಾನದ ಮಹಾದ್ವಾರವಿರುವ ಕುಲ್ಕುಂದದಿಂದ ನೇರವಾಗಿ ನಮ್ಮ ಕಾರು ಬಿಸಿಲೆ ಘಾಟಿಯ ರಸ್ತೆಯಲ್ಲಿ ಸಾಗಿತು. ಘಾಟಿರಸ್ತೆ, ದಿಢೀರ್ ಎದುರಾಗುವ ವಾಹನಗಳ ಆತಂಕವಾಗಲೀ ಇಲ್ಲಿಲ್ಲ.